


ಎಡದಿಂದ ಬಲಕ್ಕೆ:

1. ಆಶೆಯನ್ನು ಎಳೆದರೆ ಕೊರಳಿಗೆ ಉರುಳಾದೀತು (4)
3. ದಿನವೂ ವಾದಿಸುವವನಿಗೆ ಸರಿಸಮನಾದವ ಗೊತ್ತೇ? (3)
4. ಪರರ ಹಿತಚಿಂತನೆಯಿಂದ ಅದು ಹೊರತಾಗಿದೆ ಬಿಡಿ (3)
6. ತಬಲ ಹೊತ್ತು ಹೊತ್ತು ಈಗ ಶಕ್ತಿಯೇ ಇಲ್ಲವಾಗಿದೆ (4)
7. ಗುಸು ಗುಸು ಮಾತೆಲ್ಲ ಪಾಯಸದ ಕಾಳಿನ ಬಗೆಗೆ (4)
9. ಸರ ತಿರುಗಿಸಿ ಮಾಯೆ ಬೆರೆಸಿದ ಸಂದರ್ಭ–ರುಚಿಯೋ ರುಚಿ (4)
12. ಪಾಸಾದನೆಂದೊಡನೆ ಆರಂಭವಾಯಿತು ಗಳಿಕೆ (4)
14. ಪುನಃ ಪುನಃ ಅದೇ ನೆಪ ಕೇಳಿದ್ದರ ಸ್ಮರಣೆ (3)
15. ದ್ವಾರಕೆಯಲ್ಲಿ ಕಂಡ ಬಾಲಕ ಇವನೇ (3)
16. ತರಗತಿಯ ಆರಂಭಕ್ಕೆ 'ಕಾಲಮಾನದ ಹಾಡು' (4)

ಮೇಲಿಂದ ಕೆಳಕ್ಕೆ:

1. ಅಧಿಕವಾದದ್ದೇನಿಲ್ಲ, ಅದು 'ಮೂಲ ಸಮಯ' (4)
2. ಶುರುವಾಗಿದ್ದೇ ಹಾಗೆ–'ಬಾಣದಷ್ಟು ಬೇಗ' (4)
3. ತುಸು ತುಸುವೇ ಆದರೂ ನಿರಂತರ (3)
5. ತುರಗ ಹೊರಟೊಡನೆ ಆರಂಭ ಅಲೆ ಅಲೆ (3)
6. ಹೊಸತರಲ್ಲಿ ಹಾಗೇ ಕೈಯಿಂದ ಕೈಗೆ ಬದಲು (4)
8. ಸುಮ್ಮನಿರದೆ ತಾನೇ ಜೈಲು ಕಂಡ (4)
10. ಹಸಿವನ್ನೇ ತಡೆದುಕೊಳ್ಳಲು ತಾಳ್ಮೆ ಬೇಕು (3)
11. 'ಮೃತ್ಯುದೇವತೆಯ ನಗರ'–ನರಕ ತಾನೇ? (4)
12. ಆ ಸಂದರ್ಭಧ ಪ್ರಧಾನ ಕಾರ್ಯಕ್ರಮ ಉಡುಗೊರೆ ನೀಡುವಿಕೆ (4)
13. ಅಲ್ಲಿ ಗುಂಪಾಗಿರುವ ದಂಶಕಗಳ ಸಂಖ್ಯೆ ಹತ್ತು ಮುಟ್ಟಿದೆ (3)

## ಪದಬಂಧ 26-1-2012 ಉತ್ತರಗಳು

ಎಡದಿಂದ ಬಲಕ್ಕೆ:

1. ಅಧ್ಯಯನ; 3. ವ್ಯಸನಿ; 4. ರೇವತಿ; 6. ಲವಕುಶ; 7. ಕಲ್ಲುಹಾಕು; 8. ಬರಿಗಾಲು; 10. ರಸಬಾಳೆ; 12. ದೈತ್ಯ ಮೀನು; 14. ಗರಗಸ; 16. ಸನಿಹ; 17. ಬಡಿತ; 18. ನರಹರಿ.

ಮೇಲಿಂದ ಕೆಳಕ್ಕೆ:

1. ಅನಿಲ; 2. ನರೇಶ; 3. ವ್ಯವಹಾರ; 5. ತಿಜೋರಿ; 7. ಕನವರ; 9. ಲುಕಸಾನು; 11. ಬಾಣಸ; 13. ಸತ್ಯವಂತ; 14. ಗಹನ; 15. ಸಬರಿ (=ಶಬರಿ).

# ವಾನರ-ವಿಶೇಷ

## ಒರಾಂಗ್ ಉಟಾನ್-ಏನು ವಿಶೇಷ?

ಒರಾಂಗ್ ಉಟಾನ್ – ಅದೊಂದು ವಾನರ. ಇಡೀ ಜಗತ್ತಿನಲ್ಲಿ ಈ ವಾನರರು ನೈಸರ್ಗಿಕವಾಗಿ ನೆಲೆಸಿರುವುದು 'ಬೋರ್ನಿಯೋ ಮತ್ತು ಸುಮಾತ್ರಾ'ಗಳ ವೃಷ್ಟಿವನಗಳಲ್ಲಿ ಮಾತ್ರ. ಈ ಪ್ರದೇಶಗಳ ಸ್ಥಳೀಯ ಜನ ತಮ್ಮ ಮಲಯನ್ ಭಾಷೆಯಲ್ಲಿ ಈ ವಾನರನನ್ನು 'ಕಾಡಿನ ಮನುಷ್ಯ' ಎಂದೇ ಕರೆದದ್ದರಿಂದ 'ಒರಾಂಗ್ ಉಟಾನ್' ಎಂಬ ಆ ಹೆಸರೇ ಈಗಲೂ ಉಳಿದಿದೆ. ಕೆಂಬಣ್ಣದ ಕೂದಲುಗಳು ಆವರಿಸಿದ ಶರೀರದ ಈ ವಾನರ 'ಕೆಂಪು ವಾನರ' ಎಂದೂ 'ನರ ವಾನರ' ಎಂದೂ ಪ್ರಸಿದ್ಧ.

ಒರಾಂಗ್ ಉಟಾನ್ ನೂರಕ್ಕೆ ನೂರರಷ್ಟು ವೃಕ್ಷವಾಸಿ. ಅದರ ಕೈ–ಕಾಲುಗಳು, ಪಾದ–ಹಸ್ತಗಳು ವೃಕ್ಷವಾಸಕ್ಕಾಗಿಯೇ ವಿನ್ಯಾಸಗೊಂಡಿವೆ. ವೃಕ್ಷದಿಂದ ವೃಕ್ಷಕ್ಕೆ, ಅಡವಿ ಚಾವಣಿಯಲ್ಲೇ ಕೊಂಬೆ ರಂಬೆಗಳನ್ನು ಹಿಡಿದು ಲೀಲಾಜಾಲವಾಗಿ ಓಡಾಡುವ ಈ ವಾನರ ನೆಲಕ್ಕೆ ಇಳಿಯುವುದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ನೆಲದಿಂದ ನೂರು ಅಡಿಗಳ ಎತ್ತರದ ಕೊಂಬೆಗಳ ಮೇಲೇ ಚಲಿಸುತ್ತ, ಆಹಾರ ಅರಸುತ್ತ ಬದುಕುವ ಒರಾಂಗ್ ಉಟಾನ್‌ಗಳು ವೃಕ್ಷಗಳ ಮೇಲೆ ಎಲೆಗಳ ಮೆತ್ತೆ ಹಾಸಿಕೊಂಡು ಮಲಗುತ್ತವೆ. ಒರಾಂಗ್ ಉಟಾನ್‌ನಷ್ಟು ಭಾರೀ ಗಾತ್ರದ–ತೂಕದ ಸಂಪೂರ್ಣ ವೃಕ್ಷವಾಸಿ ಇಡೀ ಪ್ರಾಣಿಲೋಕದಲ್ಲೇ ಬೇರೆ ಯಾವುದೂ ಇಲ್ಲ. ಈ ವಾನರರಲ್ಲಿ ವಯಸ್ಕ ಗಂಡುಗಳು ಒಂದು ನೂರು ಕಿಲೋ ತೂಕ ತಲುಪುತ್ತವೆ. ಹೆಣ್ಣುಗಳದು ಅದರ ಅರ್ಧ ತೂಕ. ಹೆಣ್ಣು–ಗಂಡುಗಳ ನಡುವೆ ಬಹಳ ಭಿನ್ನ ಮುಖ ಲಕ್ಷಣಗಳಿರುವುದೂ ಈ ವಾನರರ ಮತ್ತೊಂದು ವೈಶಿಷ್ಟ್ಯ (ಚಿತ್ರದಲ್ಲಿ ಗಮನಿಸಿ).



ಒರಾಂಗ್ ಉಟಾನ್ ಕಟ್ಟಾ ಸಸ್ಯಾಹಾರಿ. ಹಣ್ಣುಗಳೇ ಅದರ ಮುಖ್ಯ ಆಹಾರ. ಚಿಗುರೆಲೆಗಳನ್ನೂ ಎಳಸಾದ ಸಸ್ಯ ಕಾಂಡಗಳನ್ನೂ ಅವು ಸೇವಿಸುತ್ತವೆ. ಈ ವಾನರ ಬಹಳ ಬುದ್ಧಿವಂತ ಕೂಡ. ಧಾರಾಕಾರ ಮಳೆ ಸುರಿವಾಗ ಅವು ಭಾರೀ ಎಲೆಗಳನ್ನು 'ಕೊಡೆ'ಗಳಂತೆ ಹಿಡಿದು ಕೂರುತ್ತವೆ. ಎಲೆಗಳನ್ನು 'ದೊನ್ನೆ'ಗಳಂತೆ ಮಾಡಿ ಮಳೆ ನೀರನ್ನು ಸಂಗ್ರಹಿಸಿ ಕುಡಿಯುತ್ತವೆ. ಹಣ್ಣುಗಳನ್ನು ಮಾತ್ರವೇ ಸೇವಿಸುವ 'ಹಾರ್ನ್‌ಬಿಲ್' ಹಕ್ಕಿಗಳನ್ನೇ ಗಮನಿಸಿ ಅವುಗಳ ಹಾದಿಯಲ್ಲೇ ಪಯಣಿಸಿ ಹಣ್ಣಿನ ವೃಕ್ಷಗಳನ್ನು ಪತ್ತೆ ಮಾಡಿಕೊಳ್ಳುತ್ತವೆ.

ಒರಾಂಗ್ ಉಟಾನ್‌ಗಳದು ಮನುಷ್ಯರಂತೆಯೇ ನಿಧಾನ ಬೆಳವಣಿಗೆ: ದೀರ್ಘ ಆಯುಷ್ಯ. ಈ ವಾನರರಲ್ಲಿ ಹೆಣ್ಣುಗಳು ಗರ್ಭಧರಿಸುವುದು ಎಂಟು ವರ್ಷಗಳಿಗೊಮ್ಮೆ ಮಾತ್ರ. ಇಷ್ಟು ನಿಧಾನದ ಸಂತಾನವರ್ಧನೆ ಇನ್ನಾವ ವನ್ಯ ಪ್ರಾಣಿಯಲ್ಲೂ ಇಲ್ಲ. ಇದರ ಜೊತೆಗೆ ಬೋರ್ನಿಯೋ ಮತ್ತು ಸುಮಾತ್ರಾಗಳಲ್ಲಿನ ನಿರಂತರ ಅರಣ್ಯ ನಾಶದಿಂದಾಗಿ ಈ ವಾನರರ ಸಂಖ್ಯೆ ಕ್ಷಿಪ್ರವಾಗಿ ಕುಗ್ಗುತ್ತಿವೆ. ಅಳಿದು ಹೋಗುವ ಹಾದಿ ಹಿಡಿದಿದೆ.

■ ಎನ್. ವಾಸುದೇವ್